ಗಂಡುಮಕ್ಕಳನ್ನು ಕಲಬುರಗಿಯಲ್ಲಿಟ್ಟು ಓದಿಸುತ್ತಾ ಈ ಒಕ್ಕಲುತನ ತಮ್ಮೊಂದಿಗೇ ಕೊನೆಗೊಳ್ಳಲೆಂದು ಬಯಸುತ್ತಿದ್ದರೆ ಬಸವರಾಜಪ್ಪನ ನಡೆ ಮಾತ್ರ ವಿರುದ್ಧ ದಿಕ್ಕಿಗಿತ್ತು. ತನ್ನ ನಂತರ ಒಕ್ಕಲುತನಕ್ಕೆ ಮಗನೇ ವಾರಸುದಾರನಾಗಬೇಕೆಂದು ಇಚ್ಛಿಸುತ್ತಿದ್ದವನಿಗೆ ಮಗ ಫೇಲಾದದ್ದು ಅವನಿಗೆ ರೋಗಿ ಬಯಸಿದ್ದು ವೈದ್ಯರು ಹೇಳಿದ್ದು ಒಂದೇ ಎನ್ನುವಂತಾಗಿತ್ತು.

ಸಾವಯವ ಕೃಷಿಗೆ ಆದ್ಯತೆ ನೀಡುತ್ತಿದ್ದ ಬಸವರಾಜಪ್ಪನಿಗೆ ಭೂಮಿತಾಯಿ ಎಂದೂ ಮೋಸ ಮಾಡಿರಲಿಲ್ಲ. ಎರಡು ಬಾರಿ ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದಿಂದ ಪ್ರಗತಿಪರ ರೈತನೆಂದು ಗೌರವಕ್ಕೆ ಪಾತ್ರನಾಗಿದ್ದ. ಕೆಲವೊಮ್ಮೆ ಕಷ್ಟಗಳು ಹುಡುಕಿಕೊಂಡು ಬರುವಂತೆ ಕಳೆದ ಎರಡು ವರ್ಷಗಳಿಂದ ಮಳೆ ಇಲ್ಲದೆ ಕೆರೆ ಒಣಗಿತ್ತು. ನೀರಿನ ಕೊರತೆಯಿಂದ ಕೃಷಿಕೆಲಸ ಕುಂಠಿತಗೊಂಡಿತ್ತು. ಗಾಯದ ಮೇಲೆ ಉಪ್ಪು ಸವರಿದಂತೆ ಊರಿನಲ್ಲಿ ಕರಟಕ ದಮನಕರೆಂದೇ ಖ್ಯಾತರಾಗಿದ್ದ ಧೀರೇಂದ್ರ ಗೌಡ ಮತ್ತು ಅಲ್ದಿ ಮಲಕಾಣಿ ಮುಖ್ಯರಸ್ತೆಗೆ ಹೊಂದಿಕೊಂಡಿದ್ದ ಬಸವರಾಜಪ್ಪನ ಹೊಲದ ಮೇಲೆ ಕಣ್ಣುಹಾಕಿದ್ದರು.

* * *

ಧೀರೇಂದ್ರ ಗೌಡ ಮತ್ತು ಅಲ್ದಿ ಮಲಕಾಣಿ ಅವರೇನೂ ಗಳಸ್ಯಕಂಠಸ್ಯ ಗೆಳೆಯರಾಗಿರಲಿಲ್ಲ. ತಮಗೆ ಲಾಭವಾಗುವುದಾದರೆ ಅದು ಎಂಥಾ ಹೀನ ಕೆಲಸವಾದರೂ ಇಬ್ಬರೂ ಒಂದಾಗುತ್ತಿದ್ದರು. ಪ್ರತಿ ಬಾರಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ತಮ್ಮ ತಮ್ಮ ಗುಂಪು ಕಟ್ಟಿಕೊಂಡು ಪ್ರತಿಸ್ಪರ್ಧಿಗಳಾಗುತ್ತಿದ್ದರು. ಮೇಲ್ನೋಟಕ್ಕೆ ಅವರಿಬ್ಬರ ನಡುವೆ ಶತ್ರುತ್ವ ಇದೆ ಎಂದು ಊರಿನವರಿಗೆ ಅನ್ನಿಸುತ್ತಿದ್ದರೂ ಆಂತರ್ಯದಲ್ಲಿ ಇಬ್ಬರ ನಡೆ ಒಂದೇ ಆಗಿತ್ತು. ಯಾರದೇ ಗುಂಪು ಪಂಚಾಯಿತಿಯ ಗದ್ದುಗೆ ಏರಿದರೂ ಲಾಭವನ್ನು ಇಬ್ಬರೂ ಸಮನಾಗಿ ಹಂಚಿಕೊಳ್ಳುತ್ತಿದ್ದರು. ಬಡರೈತರ ಜಮೀನಿನ ಮೇಲೆ ಬ್ಯಾಂಕ್‌ನಿಂದ ಸಾಲ ಪಡೆದು ಜಮೀನಿನ ನಿಜವಾದ ಯಜಮಾನರಿಗೆ ದಕ್ಕದಂತೆ ಯೋಜನೆ ಹೆಣೆಯುತ್ತಿದ್ದರು. ಅದೆಷ್ಟೋ ರೈತರಿಗೆ ಸಾಲ ಕೊಟ್ಟು ಜಮೀನು ಬರೆಸಿಕೊಂಡು ಬಡ್ಡಿ, ಚಕ್ರಬಡ್ಡಿ ಲೆಕ್ಕ ಬರೆದು ಕೃಷಿಭೂಮಿಯನ್ನು ತಮ್ಮ ಕೈವಶ ಮಾಡಿಕೊಳ್ಳುವಲ್ಲಿ ಇಬ್ಬರೂ ಸಿದ್ಧಹಸ್ತರಾಗಿದ್ದರು.

ಧೀರೇಂದ್ರ ಗೌಡ ಮತ್ತು ಮಲಕಾಣಿಗೆ ರೊಕ್ಕಕ್ಕಿಂತ ಯಾವುದೂ ಮುಖ್ಯವಾಗಿರಲಿಲ್ಲ. ಹೇಲಿನಲ್ಲಿ ರೊಕ್ಕ ಬಿದ್ದರೂ ನಾಲಗೆಯಿಂದ ಎತ್ತುವರು ಎಂದು ಅವರಿಬ್ಬರ ಬಗ್ಗೆ ಊರಿನ ಜನ ಮಾತನಾಡಿಕೊಳ್ಳುತ್ತಿದ್ದರು. ಧೀರೇಂದ್ರಗೌಡನ ಮಗಳು ಹೆರಿಗೆಯಲ್ಲಿ ರಕ್ತಸ್ರಾವವಾಗಿ ಸಾವನ್ನಪ್ಪಿದಾಗ ಗೌಡ ಬೀಗರಿಗೆ ಪೊಲೀಸ್ ಕಂಪ್ಲೇಂಟ್ ಕೊಡುವುದಾಗಿ ಹೆದರಿಸಿದ್ದ. ಮರ್ಯಾದೆಗೆ ಅಂಜಿದ ಅಳಿಯನ ಮನೆಯವರು ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ರಾಜಿ ಮಾಡಿಕೊಂಡಿದ್ದರು. ಗೌಡ, ಮಗಳ ಹೆಣ ಮುಂದಿಟ್ಟು ಕೊಂಡು ವ್ಯವಹಾರ ಮಾಡಿದನೆಂದು ಇಡೀ ಊರು ಅಸಹ್ಯಪಟ್ಟುಕೊಂಡಿತ್ತು. ಇದೇ ಧೀರೇಂದ್ರಗೌಡನ ಮಗ ಶರಣ ಗೌಡ ತಮ್ಮ ಹೊಲದ ಕೆಲಸದಾಳು ಮಾದನ ಮಗಳನ್ನು ಪ್ರೀತಿಸುವ ನಾಟಕವಾಡಿ ಅವಳು ಬಸಿರಾದದ್ದೆ ತಿರುಗಿ ಬಿದ್ದಿದ್ದ. ಧೀರೇಂದ್ರ ಗೌಡ ಹಣಕೊಟ್ಟು ಮಾದನ ಕುಟುಂಬವನ್ನು ಊರಿನಿಂದ ಒಕ್ಕಲೆಬ್ಬಿಸಿ ಪ್ರಕರಣವನ್ನು ಮುಚ್ಚಿಹಾಕುವ ಹುನ್ನಾರ ಮಾಡಿದ್ದ. ಬಸವರಾಜಪ್ಪ ಮಧ್ಯಪ್ರವೇಶಿಸಿದ್ದರಿಂದ ಧೀರೇಂದ್ರ ಗೌಡನ ಲೆಕ್ಕಾಚಾರ ತಲೆಕೆಳಗಾಗಿ ಮಾದನಿಗೆ ನ್ಯಾಯ ಸಿಕ್ಕಿತ್ತು. ಗೌಡ ಒಲ್ಲದ ಮನಸ್ಸಿನಿಂದ ಮಾದನ ಮಗಳನ್ನು ಸಣ್ಣಗೌಡನಿಗೆ ತಂದುಕೊಂಡು ಸಂಬಂಧಿಕರಲ್ಲಿ ಮರ್ಯಾದೆ ಹೋಯಿತೆಂದು ಮಗ ಸೊಸೆ ಇಬ್ಬರನ್ನೂ ಕಲಬುರಗಿಯಲ್ಲಿ ಮನೆ ಮಾಡಿ ಇಟ್ಟಿದ್ದ. ಬಸವರಾಜಪ್ಪನ ಮುಖ ನೋಡಿದಾಗಲೆಲ್ಲ ಧೀರೇಂದ್ರ ಗೌಡನಿಗೆ ಮಾದ ತನ್ನ ಸಂಬಂಧಿ ಎನ್ನುವುದು ನೆನಪಾಗಿ ಹೊಟ್ಟೆಯಲ್ಲಿ ಬೆಂಕಿಸುರಿದಂತಾಗುತ್ತಿತ್ತು.

ಧೀರೇಂದ್ರ ಗೌಡ ಚಾಪೆಯಡಿ ತೂರಿದರೆ ಅಲ್ದಿ ಮಲಕಾಣಿ ರಂಗೋಲಿ ಕೆಳಗೆ ನುಸುಳುವಷ್ಟು ನಿಸ್ಸೀಮನಾಗಿದ್ದ. ವಾಸಪ್ಪ ಕುಲಕರ್ಣಿ 'ತಬ್ಬಿಕೊ' ಪ್ರಕರಣದಲ್ಲಿ ಇಡೀ ಐದುಲಕ್ಷ ರೂಪಾಯಿಗಳ ಗಂಟನ್ನು ನುಂಗಿ ನೀರು ಕುಡಿದಿರುವನೆಂದು ಊರಲ್ಲಿ ಜನ ಗುಸುಗುಸು ಮಾತನಾಡುತ್ತಿದ್ದರಾದರೂ ಯಾರೊಬ್ಬರಿಗೂ ಬಾಯಿಬಿಟ್ಟು ಹೇಳುವ